**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 53/2024**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ.05**

**ದಿನಾಂಕಃ 14.08.2025** **ಸಿಡಬ್ಲ್ಯೂ.07**

| | |
|---|---|
| ಹೆಸರು | ಈರಪ್ಪ |
| ತಂದೆ ಹೆಸರು | ಮಾಳಪ್ಪ |
| ವಯಸ್ಸು | 29 ವರ್ಷ |
| ಉದ್ಯೋಗ | ಕೆ ಎಸ್ ಆರ್ ಟಿ ಸಿ ನೌಕರ |
| ವಾಸ ಸ್ಥಳ | ದಾವಣಗೆರೆ |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ.1 ರವರ ಪರಿಚಯವಿದೆ. ಚಾಸಾ.4 ರಿಂದ 6 ರವರ ಪರಿಚಯವಿದೆ. ಚಾಸಾ.8 ರಿಂದ 10 ರವರ ಪರಿಚಯವಿದೆ. 1 ಮತ್ತು 2 ನೇ ಆರೋಪಿತರ ಪರಿಚಯವಿದೆ. ದಿಃ 11.09.2023 ರಂದು ನಾನು ಹರಿಹರ ಬಸ್ ನಿಲ್ದಾಣದಲ್ಲಿ ನಿಲ್ದಾಣಾಧಿಕಾರಿಯಾಗಿ ಕೆಲಸ ನಿರ್ವಹಿಸುತ್ತಿದ್ದೆ. ಚಾಸಾ.1 ಕೆ ಎಸ್ ಆರ್ ಟಿ ಸಿ ಬಸ್ ಚಾಲಕ ಸದರಿಯವರನ್ನು ಆ ದಿನ 113/2014 ರ ಮಾರ್ಗಕ್ಕೆ ಚಾಲಕನನ್ನಾಗಿ ನೇಮಿಸಿದ್ದೆನು. ಚಾಸಾ.1 ರವರು ಚಲಾಯಿಸುತ್ತಿದ್ದ ಬಸ್ ಮದ್ಯಾಹ್ನ 3.05 ಗಂಟೆಗೆ ಶಿವಮೊಗ್ಗದಿಂದ ಹರಿಹರಕ್ಕೆ ಬರುವ ಸಂದರ್ಭದಲ್ಲಿ ಬೈಪಾಸ್ ಹತ್ತಿರ ಇಬ್ಬರು ವ್ಯಕ್ತಿಗಳು ತಮ್ಮ ಬೈಕ್ ಮೇಲೆ ಬಂದು ಅಡ್ಡಗಟ್ಟಿ ಚಾಲಕನನ್ನು ತಮ್ಮ ಕೈಗಳಿಂದ ಹೊಡೆದರು. ಚಾಸಾ.1 ರವರಿಗೆ ಬಾಯಲ್ಲಿ ರಕ್ತ ಬಂದಿತ್ತು. ಚಾಸಾ.1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಹಾಗೂ ಜೀವ ಬೆದರಿಕೆ ಹಾಕಿರುತ್ತಾರೆ. ಸದರಿ ಸಂದರ್ಭದಲ್ಲಿ ಆರೋಪಿತರು ಬಸ್ ನ ಬಾಗಿಲನ್ನು ಮುರಿದು ಅದರ ಗ್ಲಾಸುಗಳನ್ನು ಸಹ ಒಡದಿರುತ್ತಾರೆ. ಸದರಿ ವ್ಯಕ್ತಿಗಳ ಹೆಸರು ವಿಳಾ ವಿಚಾರಿಸಲಾಗಿ ಕೌಶಿಕ್ ಮತ್ತು ದರ್ಶನ್ ಎಂದು ಪೊಲೀಸರು ನನಗೆ ತಿಳಿಸಿದರು. ಚಾಸಾ.1 ರವರು ಹರಿಹರ ಆಸ್ಪತ್ರೆಗೆ ಚಿಕಿತ್ಸೆ ಪಡೆಯಲು ಹೋಗಿದ್ದರು. ಅಲ್ಲಿ ನಾನು ಮತ್ತು ಚಾಸಾ.6 ರವರು ಚಾಸಾ.1 ರವರನ್ನು ಬೇಟಿಯಾಗಿ ವಿಚಾರ ಪಡೆದುಕೊಂಡಿರುತ್ತೇವೆ. ನಂತರ ನಾನು ವಿಚಾರವನ್ನು ನಮ್ಮ ಮೇಲಾದಿಕಾರಿಗಳಿಗೆ ತಿಳಿಸಿರುತ್ತೇನೆ ಹಾಗೂ ಚಾಸಾ.1 ರವರು ಠಾಣೆಗೆ ದೂರು ನೀಡಿರುತ್ತಾರೆ. ಈ ಎಲ್ಲಾ ವಿಚಾರವಾಗಿ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ವೈ ಹೆಚ್ ಡಿ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಘಟನೆಗಳನ್ನು ನಾನು ಕಣ್ಣಾರೆ ಕಂಡಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಪ್ರಯಾಣಿಕರು ಪ್ರಯಾಣಿಕರು ಮಾಡಿದ ವಿಡಿಯೋ ಚಿತ್ರಾವಳಿಗಳನ್ನು

ನೋಡಿ ಹಾಗೂ ಚಾಸಾ.1 ರವರು ಹೇಳಿದ ಮೇರೆಗೆ ನನಗೆ ತಿಳಿದಿರುತ್ತದೆ. ಮೊಬೈಲ್ ನಲ್ಲಿ ಚಿತ್ರೀಕರಣ ಮಾಡಿದ ವಿಡಿಯೋಗಳನ್ನು ಕಂಪ್ಯೂಟರ್ ಗೆ ಹಾಕಿ ನಂತರ ಸಿಡಿ ಪಡೆಯಬೇಕು ಎಂದರೆ ಸರಿ. ಈ ರೀತಿ ಮಾಡುವ ಸಂದರ್ಭದಲ್ಲಿ ಹೊಸ ತಂತ್ರಜ್ಞಾನ ಬಳಸಿ ಮುಖ ಬದಲಾವಣೆ ಹಾಗೂ ಶಬ್ದ ಬದಲಾವಣೆ ಮಾಡಬಹುದು ಎಂದರೆ ನನಗೆ ಗೊತ್ತಿಲ್ಲ. ಚಾಸಾ.1, 4 ರಿಂದ 10 ನಮ್ಮ ಇಲಾಖೆಯಲ್ಲಿ ಕೆಲಸ ಮಾಡುವ ವ್ಯಕ್ತಿಗಳು ಎಂದರೆ ಸರಿ. ನಾನು ಯಾರ ಮೊಬೈಲ್ ನಲ್ಲಿ ವಿಡಿಯೋ ಚಿತ್ರೀಕರಣ ನೋಡಿದ್ದೇನೆ ಎಂದು ನಿಖರವಾಗಿ ಹೇಳಲು ಬರುವುದಿಲ್ಲ. ಚಾಸಾ.1 ರವರಿಗೆ ಅನುಕೂಲವಾಲಿ ಎಂದು ನಾನು ಆರೋಪಿತರ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ತಪ್ಪು ಮಾಡದಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನೀವು ಪಂಚನಾಮೆಗೆ ಸಹಿ ಮಾಡಿಲ್ಲ ಎಂದರೆ ಸಾಕ್ಷಿಯು ನಾನು ಸ್ಥಳದಲ್ಲಿ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

sd/

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ